ಹೊಳೆವ ಹಿಮಾಲಯದ ನೆತ್ತಿಯನ್ನು ನೋಡುವ ನೋಟವೇ ಅದ್ಭುತ. ವರ್ಣನೆಗೆ ನಿಲುಕದ ಪ್ರಕೃತಿಯ ಈ ಚಮತ್ಕಾರ ಒಂದು ದಿವ್ಯ ಅನುಭವವೇ ಹೌದು. ಕತ್ತಲಲ್ಲೇ ಜನ ಬಂದು ಇಲ್ಲಿ ಜಾತ್ರೆಯಂತೆ ಜಮಾಯಿಸಿ ಕೇಕೆ ಹಾಕುತ್ತಾರೆ. ಅವರೆಲ್ಲಾ ಅಬ್ಬಬ್ಬೋ ಗದ್ದಲ ಶಮನವಾಗಿ ತೊಲಗಿದ ಮೇಲೆಯೇ ನಾವು ನಮ್ಮ ಪಕ್ಷಿಯ ಚಿತ್ರಬೇಟೆ ಶುರು ಹಚ್ಚಿಕೊಳ್ಳಬೇಕು, ಬೆಟ್ಟದ ಕೊಂಚ ಕೆಳಗಿನ ಒಂದು ಭಾಗದಲ್ಲಿ ನಾವು ಜಾಗ ಹಿಡಿದು ಈಗಾಗಲೇ ನಿಂತಿದ್ದೇವೆ. ಇಲ್ಲೊಂದು ಪುಟ್ಟ ಕ್ಯಾಂಟೀನ್ ಉಂಟು. ಅದರ ಮಾಲೀಕಳು ಮ್ಯಾಗಿ ಮತ್ತು ಕೆಟ್ಟ ಟೀ ತಯಾರಿಸುವುದರಲ್ಲಿ ನಿಸ್ಸೀಮೆ. ಮೋಮೋಸ್ ಕೂಡ ಮಾಡುತ್ತಾಳೆ. ಅವಳಿಗೆ ಹಣ ಕೊಟ್ಟು ನಾವು ಪಕ್ಷಿಗಳ ಸೆರೆ ಹಿಡಿಯಬೇಕು. ಇಷ್ಟವಿಲ್ಲದಿದ್ದರೂ ತಿಂಡಿ ಕಾಫಿ ಮಾಡಲೇಬೇಕು. ಇಂತಿಷ್ಟು ವ್ಯಾಪಾರವೂ ಜರಗಲೇಬೇಕು. ಏಕೆಂದರೆ ಅದು ಅವಳ ಸುಪರ್ದಿಗೆ ಸೇರಿದ ಜಾಗ. ಕಾಡಿನ ಹಕ್ಕಿಗಳು ಅವಳ ಹೋಟೇಲಿನ ಸುತ್ತಮುತ್ತವೇ ಠಳಾಯಿಸುವಂತೆ ಅವಳು ಅಕ್ಕಿನುಚ್ಚು ಚೆಲ್ಲುತ್ತಾಳೆ. ತಿಂಡಿಯ ಮೋಹಕ್ಕೆ ಹಕ್ಕಿಗಳು ಇಲ್ಲಿಗೆ ಬಂದೇ ಬರುತ್ತವೆ.

ಇಲ್ಲಿ ನಾವು ರೋಸ್ ಫಿಂಚ್ ಎಂಬ ಗುಬ್ಬಿಯಂತೆಯೇ ಇರುವ ಹಕ್ಕಿಯ ಚಿತ್ರ ತೆಗೆದೆವು. ಗುಬ್ಬಿಗೆ ಕೆಂಪು ಬಣ್ಣ ಬಳಿದರೆ ಹೇಗಿರುತ್ತದೆಯೋ ಹಾಗೆ ಇದ್ದ ಗಂಡು ಹಕ್ಕಿ. ಇದರ ಬಣ್ಣವೇ ಚೆಂದ. ಮೊಟ್ಟೆಗಾಲದಲ್ಲಿ ಹೀಗೆ ಸುಂದರ ಬಣ್ಣದ ರೆಕ್ಕೆಪುಕ್ಕಗಳನ್ನು ಹೊಂದುವ ಗಂಡು, ಸಂತಾನ ಪ್ರಾಪ್ತಿಯ ನಂತರ ಮತ್ತೆ ಬಣ್ಣ ಕಳಕೊಂಡು ಮಾಮೂಲಿ ಪಕ್ಷಿಯಾಗುತ್ತದೆ. ನಮ್ಮ ಕಡೆ ಕೂಡ ಕೆಲವೊಂದು ಗುಬ್ಬಿಗಳು ಹೀಗೆ ಗುಲಾಬಿ ಬಣ್ಣಕ್ಕೆ ತಿರುಗುವುದನ್ನು ನಾನು ಕಂಡಿದ್ದೇನೆ. ಆದರೆ ಹಿಮಾಲಯದ ಸೆರಗಿನ ಹಕ್ಕಿಗಳ ಬಣ್ಣದ ಗಾಢತೆಗೆ ಹೋಲಿಕೆ ಮಾಡಿದರೆ ದಕ್ಷಿಣ ಭಾರತದ ಹಕ್ಕಿಗಳ ವರ್ಣವೈವಿಧ್ಯತೆ ತುಸು ಕಡಿಮೆಯೇ ಹೌದು. ಅದೇನೋ ಗೊತ್ತಿಲ್ಲ ಉತ್ತರ ಭಾರತದ ಹಕ್ಕಿಗಳಿಗೆ ಪ್ರಕೃತಿ ಬಣ್ಣಗಳನ್ನು ವಿತರಿಸುವಾಗ ಕೊಂಚ ಅಧಿಕ ಧಾರಾಳತನ ತೋರಿಸಿಬಿಟ್ಟಿದೆ. ಈ ಪಕ್ಷಪಾತಕ್ಕೆ ವಾತಾವರಣವೇ ಕಾರಣ ಎಂದು ಹೇಳಿ ಸುಲಭವಾಗಿ ಕೈ ತೊಳೆದುಕೊಳ್ಳಬಹುದು.

ಲಾಫಿಂಗ್ ಥ್ರಶ್ ಎನ್ನುವ ಬೂದು ಬಣ್ಣದ



ಎದೆಯ ಕೆಂಗರಿಯ ಹಕ್ಕಿ ನುಚ್ಚು ತಿನ್ನಲು ಓಡೋಡಿ ಬಂತು. ಪಾಚಿಗಟ್ಟಿದ ಹಸಿರು ಹುಲ್ಲಿನ ಮೇಲೆ ತನ್ನ ಮಧುರವಾದ ಶಿಳ್ಳೆ ದನಿಯಿಂದ ಹಲವು ಸಲ ನೆಗೆದಾಡಿತು. ಕಪ್ಪುಗಣ್ಣಿನ ಇದರ ನೆತ್ತಿಯ ಮೇಲೆ ಚಿತ್ರಕಾರ ನೀಟಾಗಿ ಬಿಡಿಸಿದ ಪದರಪದರಗಳ ಕಲಾವಂತಿಕೆ ಎದ್ದು ಕಾಣುತ್ತದೆ. ಹಸಿರು ಹುಲ್ಲಿನ ಮೇಲೆ ಸಿಗುವ ಹುಳಗಳ ಹಿಡಿದು ಮುಕ್ಕಲು ಆಗಾಗ ಬರುತ್ತಿದ್ದ ಬ್ಲಾಕ್ ಬರ್ಡ್ ಕೂಡ ಇಲ್ಲಿಯ ಆಕರ್ಷಣೆ. ಮುಗ್ಧ ಮಗುವಿನಂತಹ ಅಗಲ ಕಂಗಳು, ಅದರ ಸುತ್ತ ಹಳದಿ ವೃತ್ತ, ಚಳಿಗೆ ಬಿಳಿ ಮಫ್ಲರ್ ಸುತ್ತಿಕೊಂಡಂತೆ ಕಾಣುವ ಈ ಚೆಲುವನ ದನಿ ಯಾವತ್ತೂ ಮಾಧುರ್ಯ. ಹಿಲ್ ಪ್ಯಾಟ್ರಿಕ್ ಎಂಬ ಬಣ್ಣದ ಹುಂಜ ತನ್ನ ಹ್ಯಾಟೆಯೊಂದಿಗೆ ಬಂದಿತು. ಅದರ ಮೈ ಬಣ್ಣವಂತೂ ಅಬ್ಬಬ್ಬ! ಹೇಳತೀರದ್ದು. ಪ್ರಕೃತಿಯ ಈ ಸೃಷ್ಟಿ ಕಲೆಯ ಮುಂದೆ ಉಳಿದಿದ್ದೆಲ್ಲವೂ ತೃಣವೆನಿಸಲು ಶುರುವಾಗುತ್ತದೆ.

ಆಗಾಗ ಅಪ್ಪಳಿಸಿ ಕರಗಿ ಹೋಗುವ ಮಂಜಿನ ಮೋಡಗಳ ನಡುವೆ ನಿಂತು ಹಿಡಿ ಬಿಸಿಲಿಗೆ ಕಾತರಿಸಿ ಪಕ್ಷಿಗಳ ಚಿತ್ರ ತೆಗೆಯುವುದು ಸವಾಲಿನ ಕೆಲಸ. ಚಳಿ ಗಾಳಿಯೂ, ಜಡಿಮಳೆಯ ಹೊಡೆತವೂ ಹಕ್ಕಿಗಳ ಪಾಲಿಗೆ ಹಿತವಾದರೆ ನಮಗೆ ಫಜೀತಿ. ನಮ್ಮ ಕ್ಯಾಮೆರಾಗಳನ್ನು ಆಗಾಗ ಮುಚ್ಚಿಡುತ್ತಾ, ಕೆಲವೊಂದು ಕಾರೊಳಗೆ ಬೆಚ್ಚಗಿಡುತ್ತಾ ಮಧ್ಯಾಹ್ನದ ತನಕ ಸಾಕಷ್ಟು ಹಕ್ಕಿಗಳ ಚಿತ್ರಗಳನ್ನು ಕ್ಯಾಮೆರಾ ಬಾಯಿಗೆ ತುಂಬಿ ಕೊಂಡೆವು. ●